ತುಮಕೂರು ಡಿಸ್ಟ್ರಿಕ್ಟ್.

ತಾರೀಖು 27ನೇ ಜನವರಿ 1890.

ಗುಬ್ಬಿ ಕುಣಿಗಲ್ ಸಬ್ ರಿಜಿಸ್ಟ್ರೀ ಆಫಿಸಿನಲ್ಲಿ ಈ ಕೆಳಗೆ ವಿವರಿಸಿ ಯಿರುವ ದಸ್ತಾವೇಜಿಗೆ ಸಂಬಂಧಪಟ್ಟವರೇ ಆಗಲಿ ಅಥವಾ ಕ್ರಮಪ್ರಕಾರ ಅಧಿಕಾರ ಪಡದ ಮುಖ್ತಾರೀಕರೆ ಆಗಲಿ ಈ ತಾರೀಖು ಲಾಗಾಯಿತು ಒಂದು ತಿಂಗಳ ವಳಗಾಗಿ ವಾಪಸ್ ಪಡಿಯಲು ತಪ್ಪಿದಲ್ಲಿ, 1877ನೇ ಇಸವಿ ಇಂಡ್ಯೂ ರಿಜಿಸ್ಟ್ರೇಷ್ ಆಕ್ಟಿನ 85ನೇ ಸೆಕ್ಷ್ ಮೇರೆ ನಾಶ ಪಡಿಸಲ್ಪಡುವದು.

ನಂಬರ್.	ದಸ್ತಾವೇಜನ್ನ ಬರಿದುಕೊಟ್ಟವರ ಹೆಸರು.	ದಸ್ತಾವೇಜನ್ನ ಬರಿಸಿಕೊಂಡವರ ಹೆಸರು.	ದಸ್ತಾವೇಜಿನ ತಾರೀಖು.	ರಿಜಿಸ್ಟರ್ ಆದ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
119 1887—88	ಗುಬ್ಬಿ ತಾಲ್ಲೂಕು ಬಿಟ್ಟನಹಳ್ಳಿ ಗ್ರಾಮದ ರುದ್ರಯ್ಯನ ಹೆಂಡತಿ ಪುಟ್ಟಮ್ಮ	ಗುಬ್ಬಿ ತಾಲ್ಲೂಕು ಬಿಟ್ಟನಹಳ್ಳಿಯಲ್ಲಿ ಇರುವ ಪಂಚನ್ನಪ್ಪನವರ ಮಗ ಹೊಸಪ್ಪಯ್ಯ	1887ನೇ ಇಸವಿ ನವಂಬರ್ ತಾರೀಖು 19	1887ನೇ ಇಸವಿ ನವಂಬರ್ ತಾರೀಖು 19	ಐವತ್ತು ರೂಪಾಯಿ ತೆಗದುಕೊಂಡು ಬಿಟ್ಟನಹಳ್ಳಿ ಪೇಟೇದಲ್ಲಿರುವ ಪಾಳು ನಿವೇಶನವನ್ನ ಭೋಗ್ಯವಾಡಿ ಕೊಟ್ಟಿರುವದಾಗಿ ವಗೈರೆ
ಡಿಟೋ	ಕುಣಿಗಲ್ ತಾಲ್ಲೂಕು ಮೈಸೂರು ಡಿಸ್ಟ್ರಿಕ್ಟ್ ಅಮೃತೂರಿನಲ್ಲಿರುವ ನಂಜನಗೂಡಿನಲ್ಲಿರುವ ಸೀತಾರಾಮಯ್ಯ ಇವ ನ ಮಗ ಲಕ್ಷ್ಮೀನರಸಯ್ಯ	ಅಮೃತೂರು ವೆಂಕಟನಾರಣಪ್ಪನವರು	1886ನೇ ಇಸವಿ ಡಿಸಂಬರ್ ತಾರೀಖು 4	ರಿಜಿಸ್ಟ್ರೇಷ್ ನಿರಾಕರಿಸಲ್ಪಟ್ಟಿರುವ ತಪ್ಪು ಖಾಲಿ ನಿವೇಶನವನ್ನ ಆಧಾಧೆ 31ನೇ ಮಾರ್ಚಿ 1887	ಐವತ್ತು ರೂಪಾಯಿಗೆ ಅಮೃತೂರಲ್ಲಿರುವ ತಪ್ಪು ಖಾಲಿ ನಿವೇಶನವನ್ನ ಆಧಾರ ಮಾಡಿರುವದಾಗಿ ವಗೈರೆ.

ಸಿ. ಕ್ರೈಸ್,
ರಿಜಿಸ್ಟ್ರಾರ್.

ತುಮಕೂರು ಡಿವೀಜ್.

ಸಕಲ ಜನಗಳಿಗೂ ತಿಳಿಯುವ ಬಗ್ಗೆ ಯಿದರಿಂದ ತಿಳಿಯಪಡಿಸುವದೇನೆಂದರೆ, ಗುಬ್ಬಿಯಲ್ಲಿರುವ ಹೊಸದಾಗಿ ತಯಾರಾಗತಕ್ಕ ತಾಲ್ಲೂಕು ಕಚ್ಚೇರಿ ಕಾಮುಗಾರಿ ಕಂಟ್ರಾಕ್ಟಿಗಾಗಿ ಮೊಹರಾಗಿ ಬರುವ ದರಖಾಸ್ತುಗಳನ್ನು ತುಮಕೂರು ಡಿವಿಜ್ ಯಗ್ಜಿಕ್ಯೂಟಿವ್ ಯಿಂಜನಿಯರವರ ಆಫಿಸಿನಲ್ಲಿ ಬರುವ 1890ನೇ ಇಸವಿ ಫಿಬ್ರವರಿ 20ನೇ ತಾರೀಖುನರಿಗೆ ಹಿಡಿಯಲ್ಪಡುವದು.

ಸುಮಾರು ಅಂದಾಜಾ ಪರಿಮಾಣವನ್ನು ಈ ಕೆಳಗೆ ನಮೂದಿಸಿಧೆ. ಈ ಪರಿಮಾಣವು ಗೊತ್ತಾದ್ದಲ್ಲಾ, ಕಾಮುಗಾರಿಯು 1891ನೇ ಇಸವಿ ಡಿಸಂಬರು ಮಾಹೆ ಆಖೈರು ವೊಳಗಾಗಿ ಪೂರೈಸತಕ್ಕದ್ದು.

2. ಸಾಂಕ್ಷ್ ಅಂದಾಜು ಮತ್ತು ಪರತ್ತು ಇತರ ಸಂಗತಿಗಳನ್ನು ಸಪ ದಿವಿ 11 ಘಂಟೆ ಲಾಗಾಯಿತು 5 ಘಂಟೆವರಿಗೆ ತುಮಕೂರು ಡಿವೀಜ್ ಎಗ್ಜಿಕ್ಯೂಟಿವ್ ಇಂಜನಿಯರ ಆಫಿಸಿನಲ್ಲಿ ನೋಡಬಹುದು.

3. ದರಖಾಸ್ತುಗಳು ಅಚ್ಚಿನ ನಮೂನೆಯಲ್ಲಿ ಯಿರಬೇಕು. ಈ ನಮೂನೆಯನ್ನು ಎಗ್ಜಿಕ್ಯೂಟಿವ್ ಇಂಜನಿಯರವರ ಆಫಿಸಿನಲ್ಲಿ ಪಡೆಯಬಹುದು. ಬಾಬುವಾರ್ ಕೆಲಸವನ್ನು ಯಾವ ಯಾವ ದರದಲ್ಲಿ ನಡಿಸಲ್ಪಡುವದೋ ಅವನ್ನು ತೋರಿಸಿ ಕೆಳಗೆ ಕೊಟ್ಟಿರುವ ಫಾರಮಿನಂತೆ ಬಂದು ಪಟ್ಟಿ ತಯಾರಿಯಿಂದ ದರಖಾಸ್ತು ನೊಡನೆ ಕಳುಹಿಸಿ ಕೊಡಬೇಕು.

4. ಪ್ರತಿ ದರಖಾಸ್ತುಗಳೂ ಪ್ರೋನೊಟ್ ಮೂಲಕವಾಗಲಿ ವ ನಗದಾಗಲಿ 200 ರೂಪಾಯಿ ಡಿಪಾಜಿಟ್ಟನ್ನ ವಡಗೂಡಿ ಯಿರಬೇಕು. ಮತ್ತು ಗುಬ್ಬಿಯಲ್ಲಿ ಹೊಸದಾಗಿ ತಯಾರಾಗುವ ತಾಲ್ಲೂಕು ಕಚ್ಚೇರಿ ಕಾಮುಗಾರಿ ದರಖಾಸ್ತುಯೆಂತ ಲಿಫಾಫೆ ಮೇಲೆ ಬರದು ಯಿರಬೇಕು. ಹೀಗೆ ಯಿಲ್ಲದೆ ಬರುವ ದರಖಾಸ್ತುಗಳನ್ನ ತಿರಸ್ಕರಿಸಲ್ಪಡುವದು.

5. ಪ್ರತಿ ದರಖಾಸ್ತುಗಳನ್ನ ಅಂಗೀಕರಿಸತಕ್ಕದ್ದು ಛೀಫ್ ಯಿಂಜನಿಯರ್ ಸಾಹೆಬರವರದಾಗಿಯಿಧೆ. ಅವರು ಕಮ್ಮಿದರ ವ ಯಿತರ ದರಖಾಸ್ತನ್ನು ಮಂಜೂರ್ಮಾಡುವದಕ್ಕೆ ವ ದರಖಾಸ್ತನ್ನು ಅನಂಗೀಕರಿಸುವದಕ್ಕೆ ಕಾರಣವನ್ನು ಹೇಳುವದಕ್ಕೆ ಬದ್ದರಾಗಿಯಿರುವದಿಲ್ಲ.

6. ದರಖಾಸ್ತು ಮಂಜೂರ್ಮಾಡಿದ 8 ರೋಜುಗಳವೊಳಗಾಗಿ ಅಂಗೀಕರಿಸಲ್ಪಟ್ಟ ದರಖಾಸ್ತುದಾರನು ಕಂಟ್ರಾಕ್ಟ ಬಾಂಡನ್ನು ಬರದು ಕೊಡತಕ್ಕದ್ದು ಅವಶ್ಯವಾಗಿ ಯಿಧೆ. ಹೀಗೆ ಮಾಡದಿರುವ ಸಂದರ್ಭದಲ್ಲಿ ದರಖಾಸ್ತು ರದ್ದು ಆದ ಹಾಗೆ ಭಾವಿಸಲ್ಪಡುವದಲ್ಲದೆ ದರಖಾಸ್ತುದಾರನು ತನ್ನ ಡಿಪಾಜಿಟ್ ವೊಬಲಗನ್ನ ಹೋಗಲಾಡಿಸಿಕೊಳ್ಳುವನು.

7. ಯಾರ ದರಖಾಸ್ತು ಮಂಜೂರ್ಮಾಡಲ್ಪಡುವದೋ ಅಂಥಾ ದರಖಾಸ್ತುದಾರನ ಹೆಸರನ್ನ ಎಗ್ಜಿಕ್ಯೂಟಿವ್ ಇಂಜನಿಯರವರ ಆಫಿಸ್ ನೋಟಿಸ್ ಬೋರಡಿನಲ್ಲಿ ಐಯಿಂದ ಚಿಕಟ್ಟುಯಿಸಲ್ಪಡುವದು. ದರಖಾಸ್ತು ಮಂಜೂರಾಯಿತು ವ ಅನಂಗೀಕರಿಸಲ್ಪಟ್ಟಿತೆ ಯೆಂದು ಬರುವ ಪ್ರಶ್ನೆಗಳಿಗೆ ಜವಾಬು ಬರಿಯಲಾರದು.

134

8. ದರಖಾಸ್ತುಗಳ ವೈಕಿ ವೊಂದು ದರಖಾಸ್ತು ಮಂಜೂರಾದ ಕೂಡ್ಲೆ ಅನಂಗೀಕರವಾದ ದರಖಾಸ್ತುಗಳ ಡಿಪಾಜಿಟ್ ಹಣವು ವಾಪಸ್ ಮಾಡಲ್ಪಡುವದು.

ಗುಬ್ಬೀಬಳಿ ಹೊಸದಾಗಿ ತಾಲ್ಲೂಕು ಕಛೇರಿ ಕಟ್ಟತಕ್ಕದ್ದಕ್ಕೆ ಗೋಪ್ಯಾರಾ ಅಂದಾಜ್.

ಬಾಬುವಾರ್.	ಅಂದಾಜಿಗೆ.	ದರ.	ಪರಿಮಾಣ.
ಮಟ್ಟೀಕೆಲಸ ಪಾಯಬೋದಿ ..	ಸಲೆಗಜ		524
ತಳ ಪಾಯ ಭರ್ತಿ ..	ಪೊತ್ತ		..
ಘತ್ತರಗಚ್ಚಿ ..	ಸ್ಕ್ವಾ ಅಡಿ		15,891
ಈಟ್ಗೆಗಚ್ಚಿ ..	ಡಿಟೋ		17,321
ಆರು ಆಂಗುಲ ದಪ್ಪಚಪ್ಪಡಿ ಕಲ್ಲುಗಳು ..	ಚದರ ಅಡಿ		441
ನಾಲ್ಕು ವರೆ ಅಂಗುಲದಪ್ಪ ಸದರೀ ..	ಡಿಟೋ		522
ಕವರ್ಜಕೆಲ್ಲನ ..	ಸ್ಕ್ವಾ ಅಡಿ		605
ಕಾರ್ನೀಸ್ ಯಾನೆ ಚಿತ್ರಕೆಲಸ ..	ಲಾಂಬಿ ಅಡಿ		1076
ಬಂಣಾಬೊಳೆಯುವದು ..	ಚದರಅಳತೆ		127·00
ಸುಂಣದ ಗಿಲಾವ್ ..	ಡಿಟೋ		284·04
ಸುಂಣತೊಳೆಯುವದು ..	ಡಿಟೋ		157·00
ಕಟ್ಟಡದ ಮೇಲೆ ಮಂಗಳೂರು ಹೆಂಚುಹಾಕತಕ್ಕದ್ದು ..	ಡಿಟೋ		72·36
ಮೇಲ್ಭಾಗದಲ್ಲಿ ಫ್ಲಾಟ್‌ಟೆರೆಸ್ ಎಂಬದು ..	ಡಿಟೋ		1·56
ಡಿಟೋ ಬೆಂಗಾಲ ತಾರಸಿ ಹಾಕತಕ್ಕದ್ದು ..	ಡಿಟೋ		13·32
ನೆಲಕ್ಕೆ ವಜ್ರಗಾರೆ ಮತ್ತು ಗಿಲಾವು ..	ಡಿಟೋ		42·07
ಭೂಮಿಗೆ ಗ್ಯಾವಲ್ ಎಂಬ ನುರಜುಕಲ್ಲು ಹಾಕತಕ್ಕದ್ದು ..	ಡಿಟೋ		8
ತ್ಯಾಗದ ಮರದ ಕೆಲಸ ..	ಸ್ಕ್ವಾ ಅಡಿ		520½
ಕಬ್ಬಿಣದ ಕೆಲಸ ..	ಪೌಂಡ್		373
ಫ್ಲಾರ್‌ಕೊಲೀಟ್ ಬಂಣ ತೊಳೆಯುವದು ..	ಚದರ		28·74
ಮರದ ಯೆಂಣೆ 2 ಕೋಟ್ಯು ..	ಡಿಟೋ		56·35
ಬಿದರಬಾಪೆ ಬೆನ್ನು ಪೆಪ್ಪೆಯಿಂದ ಮಾಡಿದ್ದು ..	ಡಿಟೋ		28·87
ಖಜಾನೆ ಕೊಠಡೀಗೆ ಬಾಗಲುಗಳು 3′×6′ ಯಿಂದ ಕಬ್ಬಿಣ ಸಾವಾನು ಸಹಿತ ..	ಪ್ರತಿ ಬಂದೊಂದಕ್ಕೆ		1
ಸಂಣಲೆಡಜಡ್ ಬಾಗಲುಗಳು 3′×6, ..	ಡಿಟೋ		17
ಸಂಣಬಾಗಲು 3′×6, ಲೆಡಜಡ್ ..	ಪ್ರತಿ ಬಂದೊಂದಕ್ಕೆ		5
ಬಾಗಲುಗಳು ದೊಡ್ಡವು 6′×10′ ಡಿಟೋ ಮೊತ್ತವಾಗಿ ..	ಡಿಟೋ		1
ದೊಡ್ಡ ಕಿಟಕಿಗಳು 4′×5, ಇದಕ್ಕೆ ಕೇರಿಸತಕ್ಕ ಕಬ್ಬಿಣಕಡ್ಡಿ ಸಹಿತ	ಡಿಟೋ		4
ಡಿಟೋ ಸಂಣವು 3′×4′ ಡಿಟೋ ..	ಡಿಟೋ		12
ಕಿಟಕಿಗಳು ವೆನಿಷನೆಡ್ ಬಾಬತು 1½′×3½′ ..	ಡಿಟೋ		2
ಡಿಟೋ ವ್ಯಾನಲ್ಡು 3′×4′ ಮತ್ತು ಕಬ್ಬಿಣಕಡ್ಡಿ ಹಾಕಿದ್ದು ..	ಡಿಟೋ		10
ಡಿಟೋ ಬ್ಯಾಟೆನ್‌ಡ್ ಕಬ್ಬಿಣದ ಕಡ್ಡಿ ಸಹ 3′×1½′ ..	ಡಿಟೋ		7
ಡಿಟೋ ಡಿಟೋ 2′×′1½ ..	ಡಿಟೋ		9
ಸೂರಪಟ್ಟಿ ಚನ್ನಾಗಿ ನಯವಾಗಿ ಕೆತ್ತಿದ್ದು ..	ಲಾಂಬಿ ಅಡಿ		80

ಎ. ಡಲಾಲ್,
ಎಗಿಕ್ಯೂಟಿವ್ ಇಂಜನೀರ್.

ಹಾಸನ ಡಿಸ್ಟ್ರಿಕ್ಟು.

4ನೇ ಜನವರೀ 1890ನೇ ಇಸವಿ.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ:—

ಸರ್ಕಾರದ ಆಜ್ಞೆ ಅನುಸರಿಸಿ ಕೆಳಗೆ ನಮೂದು ಮಾಡುವ ಈ ಡಿಸ್ಟ್ರಿಕ್ಟುಗಳ ಅನುಪಯೋಗವಾದ ರೆವಿನ್ಯೂ ರಿಕಾರ್ಡುಗಳು ನಾಶಪಡಿಸಲ್ಪಡುವವು.

ದಸ್ತೈವಜುಗಳು ದಾಖಲಾತುಗಳು ವಗೈರೆ ಪಡಿಯಲು ಅಪೇಕ್ಷೆವುಳ್ಳ ಕಕ್ಷಿಗಾರ್ರು ಈ ತಾರೀಖಿಲಾಗಾಯಿತು 3 ತಿಂಗಳ ವೊಳಗಾಗಿ ಆಯಾಯ ತಾಲ್ಲೂಕು ಅಮಲ್ದಾರ್‌ಗಳಲ್ಲಿ ಕೇಳಿಕೊಳ್ಳಬಹುದು.

1 ಹಾಸನ
2 ಮಂಜ್ರಾಬಾದು
3 ಹೊಳೇನರಸೀಪುರ
4 ಬೇಲೂರು
5 ಅರಸೀಕೆರೆ
6 ಅರಕಲ್‌ಗೂಡು
7 ಚನ್ನರಾಯಪಟ್ಣ

ಪಿ. ಯರ್. ಪೂರ್ಣಯ್ಯ,
ಡೆಪ್ಯೂಟಿ ಕಮ್ಮಿಷನರ್.